







ವರ್ಣಗಳನ್ನು ಪಡೆದಿವೆ. ಇಲ್ಲಿಯ ಬಿಸಿನೀರ ಬುಗ್ಗೆಗಳು, ನೆಲದ ಮೇಲ್ಮೈ ತಾಪಮಾನ 38 ಡಿಗ್ರಿ ಸೆಂಟಿಗ್ರೇಡ್‌ನಿಂದ 93 ಡಿಗ್ರಿ ಸೆಂಟಿಗ್ರೇಡ್‌ವರೆಗೂ ಇರುವುದಂತೆ.

ಈ ನ್ಯಾಷನಲ್ ಪಾರ್ಕ್ ಅಪರೂಪದ ಪ್ರಾಣಿ ಮತ್ತು ಸಸ್ಯಸಂಕುಲಗಳ ತವರೂ ಆಗಿದೆ. ದಟ್ಟಕಾಡೂ ಇದ್ದು, ಬೂದುತೋಳ, ಕೆಂಪು–ಕಪ್ಪು ಕರಡಿ, ಕಾಡುಕೋಣ, ಎಲ್ಕ್, ಮೂಸ್, ಮ್ಯೂಲ್, ಮೇಕೆಗಳ ಅಭಯಾರಣ್ಯವೂ ಹೌದು. ಈ ಎಲ್ಲ ಪ್ರಾಣಿಗಳೂ ಇಲ್ಲಿ ನಿರಾತಂಕವಾಗಿ ಓಡಾಡುವುದನ್ನು ಕಾಣಬಹುದು. ಈ ಪಾರ್ಕ್ ಅನ್ನು ಪರಿಸರ ಸ್ನೇಹಿಯಾಗಿ ಅಭಿವೃದ್ಧಿಗೊಳಿಸಿ, ಮಿಲಿಯಗಟ್ಟಳೆ ಪ್ರವಾಸಿಗರನ್ನು ಸೆಳೆಯುತ್ತಿರುವ ಅಮೆರಿಕಾದ ಸಾಧನೆಯೇನೂ ಸಣ್ಣದಲ್ಲ. ಹೀಗಿದ್ದೂ ಇಲ್ಲಿಯ ನೆಲದಾಳದ ಬಿಸಿ, ಕಂಪನಕ್ಕೆ ಸಾಕಷ್ಟು ಮರಗಳು ಸುಟ್ಟು ಕಳಚಿರುವುದನ್ನೂ ಕಂಡಾಗ ಸಂಕಟವಾಯಿತು. ಆದರೆ ಈ ದುರ್ಭರ ಸ್ಥಿತಿ ಪ್ರಾಕೃತಿಕ ಸತ್ಯದ ಫಲಿತಾಂಶವೇ ಹೊರತು, ಮಾನವನ ದುರಾಸೆಯ ಫಲದ್ದಂತೂ ಅಲ್ಲವಲ್ಲ ಎಂದನ್ನಿಸಿ ಸಮಾಧಾನವೂ ಆಯಿತು. ಯೆಲ್ಲೋಸ್ಟೋನ್ ಪಾರ್ಕ್ ಅನ್ನು ಪ್ರವಾಸಿಗರಿಗೆ ಪರಿಚಯಿಸುವಲ್ಲಿ ಸರ್ಕಾರ ಸಾಕಷ್ಟು ಪರಿಸರಸ್ನೇಹಿ ಕ್ರಮಗಳನ್ನು ಕೈಗೊಂಡಿದೆ.